

ದುಬೈನಲ್ಲಿ ನಡೆದ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಟದ ಆರಂಭಕ್ಕೆ ಮುನ್ನ ರಾಷ್ಟ್ರಗೀತೆ ಹಾಡಲು ಸಾಲಾಗಿ ನಿಂತಿರುವ ಭಾರತ–ಪಾಕಿಸ್ತಾನ ಆಟಗಾರರು.

ಮುಲ್ವಂತ್‌ರೈ ಹಿಮ್ಮತ್‌ಲಾಲ್ ವಿನೂ ಮಂಕಡ್ 1952ರ ಅಕ್ಟೋಬರ್ 16, 17, 18 ಮೂರೂ ದಿನಗಳನ್ನು ತಮ್ಮ ಜೀವಮಾನದಲ್ಲಿಯೇ ಮರೆತಿರಲಿಲ್ಲ. ದೆಹಲಿಯ ಫಿರೋಜ್ ಷಾ ಕೋಟ್ಲಾದಲ್ಲಿ ಟೆಸ್ಟ್ ಪಂದ್ಯ ಆಡಲು ಪಾಕಿಸ್ತಾನ ಮೊದಲ ಸಲ ಬಂದಿತ್ತು. ನಾಲ್ಕೇ ದಿನಗಳ ಪಂದ್ಯ. ಮೊದಲ ಇನಿಂಗ್ಸ್‌ನಲ್ಲಿ ಭಾರತ 372 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಪಾಕಿಸ್ತಾನಕ್ಕೆ ಎರಡೂ ಇನಿಂಗ್ಸ್‌ಗಳಿಂದ ಅಷ್ಟು ರನ್ ಜಮೆ ಮಾಡಲು ಆಗಲಿಲ್ಲ. ಇನಿಂಗ್ಸ್ ಹಾಗೂ 70 ರನ್‌ಗಳ ಅಂತರದಿಂದ ಮೂರನೇ ದಿನವೇ ಸೋತು ಸುಣ್ಣವಾಯಿತು. ಮಂಕಡ್ ಮೊದಲ ಇನಿಂಗ್ಸ್‌ನಲ್ಲಿ 52 ರನ್ ನೀಡಿ ಪಡೆದ 8 ವಿಕೆಟ್‌ಗಳು ಅವರ ವೃತ್ತಿಬದುಕಿನ ಶ್ರೇಷ್ಠ ಬೌಲಿಂಗ್ ಪ್ರದರ್ಶನ ಎನಿಸಿಕೊಂಡಿತ್ತು. ಅವರು ಮಾಡಿದ್ದ 47 ಓವರ್‌ಗಳಲ್ಲಿ 27 ಮೇಡನ್ ಆಗಿದ್ದವು! ಎರಡನೇ ಇನಿಂಗ್ಸ್‌ನಲ್ಲೂ '79ಕ್ಕೆ 5' ಎಂಬ ಅವರ ಬೌಲಿಂಗ್ ಮಿಂಚು ಆಗ ರೇಡಿಯೊಗಳಲ್ಲಿ ಸುದ್ದಿ.

1947ರಲ್ಲಿ ಭಾರತಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಸಿಕ್ಕಮೇಲೆ ದೇಶ ಹೋಳಾಗಿ, ಆ ಇನ್ನೊಂದು ಹೋಳು ಪಾಕಿಸ್ತಾನ ಆಯಿತು. ಅಂದಿನಿಂದ ಎಪ್ಪತ್ತೊಂದೂವರೆ ವರ್ಷಗಳು ಉರುಳಿವೆ. ರಾಜಕೀಯವಾಗಿ ಎರಡೂ ದೇಶಗಳ ನಡುವಿನ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಇನ್ನೂ ಸಿಕ್ಕಿಲ್ಲ. ಪುಲ್ವಾಮಾದಲ್ಲಿ ಉಗ್ರರು ದಾಳಿ ನಡೆಸಿ, ಭಾರತದ 42 ಯೋಧರ ಸಾವಿಗೆ ಕಾರಣರಾದ ಮೇಲಂತೂ ಭಾರತದ ಬಹುತೇಕರು ಇಡೀ ಪಾಕಿಸ್ತಾನವನ್ನು ಮುಗಿಸಿಬಿಡಬೇಕು ಎನ್ನುವಷ್ಟು ಕ್ರುದ್ಧರಾಗಿ ಮಾತನಾಡತೊಡಗಿದ್ದಾರೆ. ಎರಡೂ ದೇಶಗಳ ನಡುವೆ ಆಗೀಗ ಶಾಂತಿಮಂತ್ರ ಪಠಣದ ಆಶಾವಾದ ಹುಟ್ಟುಹಾಕಿದ್ದು ಕ್ರೀಡೆ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕು.

1947ರವರೆಗಿನ ಹಾಕಿ ಶಕ್ತಿ ಭಾರತ. 1928ರಲ್ಲಿ ಮೊದಲ ಒಲಿಂಪಿಕ್ಸ್ ಚಿನ್ನ ಗೆದ್ದಾಗಿನಿಂದ ಸಿಕ್ಕಿದ್ದ ಪಟ್ಟ ಅದು. 1932, 36, 48, 52, 56, 64, 1980 – ಹೀಗೆ 20ನೇ ಶತಮಾನದ ವರ್ಷಗಳಲ್ಲಿ ಒಲಿಂಪಿಕ್ಸ್ ಬಂಗಾರಗಳನ್ನು ಗೆದ್ದ ತಂಡ ನಮ್ಮದು. ಪಂಜಾಬ್ ಹಾಗೂ ಉತ್ತರ ಪ್ರದೇಶದ ಆಟಗಾರರೇ ಹೆಚ್ಚಾಗಿ ಇದ್ದ ಸಮರ್ಥ ತಂಡ ಅದು. ಮುಸ್ಲಿಮರ ಸಂಖ್ಯೆಯೂ ಅದರಲ್ಲಿ ಎದ್ದುಕಾಣುವಂತಿತ್ತು. ಸ್ವಾತಂತ್ರ್ಯಾನಂತರ ತಂಡ ಸಹಜವಾಗಿಯೇ ಒಡೆಯಿತು. ಪಾಕಿಸ್ತಾನದ ಇನ್ನೊಂದು ಹೋಳು ಸೇರಿದ ಆಟಗಾರರು ಅತ್ತಕಡೆ. ಉಳಿದವರು ಇತ್ತಕಡೆ. 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಭಾರತವು ಪಾಕಿಸ್ತಾನದ ಎದುರೇ ಸೋತ ಕಹಿ ನೆನಪು ಅನೇಕರನ್ನು ಇನ್ನೂ ಕಾಡುತ್ತಿದೆ. ಅಂದರೆ, ಭಾರತದ ಶಕ್ತಿ ಆಗ ಹಾಕಿಯಲ್ಲಿ ದುಪ್ಪಟ್ಟು ಇತ್ತು ಎಂದಾಯಿತು. ಅದರ ಅರ್ಧ ಭಾಗ ಪಾಕಿಸ್ತಾನಕ್ಕೆ ಹೋಗಿತ್ತೆನ್ನುವುದಕ್ಕೆ ಪಾಕ್‌ನ ಆ ಗೆಲುವೇ ಪುರಾವೆ.

1980ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ನಗು ಬೀರಿದ ಮೇಲೆ ಭಾರತದ ಹಾಕಿಯ ಪರಿಸ್ಥಿತಿ ಏನಾಯಿತು ನೋಡಿ. 1975ರಲ್ಲಿ ವಿಶ್ವಕಪ್ ಗೆದ್ದಿದ್ದು ಬಿಟ್ಟರೆ ಇನ್ನೊಮ್ಮೆ ಅದನ್ನು ಎತ್ತಿಹಿಡಿಯಲು ಆಗಲೇ ಇಲ್ಲ.

'ಅಂತರರಾಷ್ಟ್ರೀಯ ಹಾಕಿ ಫೆಡರೇಷನ್' (ಎಫ್‌ಐಎಚ್) ಸ್ಥಾಪಿತವಾಗಲಿ ಎಂಬ ಯೋಚನೆ ಮೊದಲು ಬಂದದ್ದು ಪಾಕಿಸ್ತಾನದ ಏರ್ ಮಾರ್ಷಲ್